# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**-ವಿಶ್ವಬ್ಯಾಂಕ್ ನೆರವಿನಡಿಯಲ್ಲಿನ ಎಸ್.ಪಿ.ಎಂ.ಯು-ಡ್ರಿಪ್ ಘಟಕಕ್ಕೆ ವಾಹನಗಳನ್ನು ಖರೀದಿಸುವ ಕುರಿತು.

**ಓದಲಾಗಿದೆ :-**

ಯೋಜನಾ ನಿರ್ದೇಶಕರು, ಎಸ್.ಪಿ.ಎಂ.ಯು (ಡ್ರಿಪ್) ಘಟಕ, ಬೆಂಗಳೂರು, ಯೊ.ಜ/ಜಸಂಅ/ಎಸ್‌ಪಿಎಂಯು/ಡ್ರಿಪ್/ವಾಹನ/2018-19/702, ದಿನಾಂಕ:16.01.2019

**ಪ್ರಸ್ತಾವನೆ :-**

ಮೇಲೆ ಓದಲಾದ ಪತ್ರದಲ್ಲಿ ಯೋಜನಾ ನಿರ್ದೇಶಕರು, ಎಸ್.ಪಿ.ಎಂ.ಯು-ಡ್ರಿಪ್ ಘಟಕ ಇವರು ಪ್ರಸ್ತುತ ಡ್ರಿಪ್ ಕಾಮಗಾರಿಗಳಿಗೆ ವಿಶ್ವಬ್ಯಾಂಕ್ ನೆರವಿನ ಧನಸಹಾಯ ಇರುವ ಕಾರಣದಿಂದ ಕೇಂದ್ರ ಜಲ ಆಯೋಗ ಹಾಗೂ ವಿಶ್ವಬ್ಯಾಂಕ್ ರವರು ವಿಮರ್ಶೆ ಸಭೆಗಳಿಗೆ ಕೇಂದ್ರ ಕಛೇರಿಗೆ ಹಾಗೂ ಅಣೆಕಟ್ಟು ಕಾಮಗಾರಿಗಳ ಪರಿವೀಕ್ಷಣೆಗೆ ಭೇಟಿ ನೀಡುತ್ತಾರೆ, ಅಣೆಕಟ್ಟುಗಳ ಪರಿವೀಕ್ಷಣೆಗೆ ಸದರಿ ಅಧಿಕಾರಿಗಳನ್ನು ಬರಮಾಡಿಕೊಡಲು ಶಿಷ್ಟಾಚಾರ ಪ್ರಕಾರ Toyota Innova ವಾಹನವನ್ನು ಒದಗಿಸಬೇಕಿರುತ್ತದೆ. DRIP-II ಕಾಮಗಾರಿಗಳನ್ನು ಸಹ ಕೈಗೆತ್ತಿಕೊಳ್ಳುವುದರಿಂದ ಕೇಂದ್ರ ಜಲ ಆಯೋಗ ಹಾಗೂ ವಿಶ್ವಬ್ಯಾಂಕ್ ರವರು ಕಾಮಗಾರಿಗಳ ಪರಿವೀಕ್ಷಣೆಗೆ ಬಂದಾಗ ಅವರಿಗೆ Innova ವಾಹನವನ್ನು ಒದಗಿಸಬೇಕಿರುತ್ತದೆ ಹಾಗೂ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು DRIP ನೋಡಲ್ ಅಧಿಕಾರಿ ಆಗಿರುವುದರಿಂದ ಅವರಿಗೂ ಸಹ ಒಂದು Hyundai Verna ವಾಹನವನ್ನು ನೀಡಬೇಕಿರುವ ಹಿನ್ನೆಲೆಯಲ್ಲಿ ಎರಡು ಹೊಸ ವಾಹನಗಳನ್ನು ಖರೀದಿಸಲು ಅವಶ್ಯವಿರುತ್ತದೆ ಎಂದು ವರದಿ ಮಾಡಿರುತ್ತಾರೆ. ಒಂದನೆಯ ಅಧಿಕಾರಯುಕ್ತ ಸಮಿತಿಯಲ್ಲಿ ಸಾಂಸ್ಥಿಕ ಬಲವರ್ಧನೆ ಘಟಕದ ಕ್ರಿಯಾ ಯೋಜನೆಯನ್ನು ರೂ.24.00 ಕೋಟಿಗಳಿಗೆ ಅನುಮೋದನೆ ನೀಡಲಾಗಿದೆ. ಈಗಾಗಲೇ ವಾಹನಗಳನ್ನು ಖರೀದಿಸಲು 4ನೇ ಮತ್ತು 5ನೇ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ರೂ.35.30 ಲಕ್ಷಗಳಿಗೆ ಲೆಕ್ಕ ಶೀರ್ಷಿಕೆ:4701-80-800-0-80-059 ರಲ್ಲಿ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ. ಪ್ರಸ್ತುತ Toyota Innova Crysta (petrol) VX 7 MT (Rs.19,10,252.00) ಮತ್ತು Hyundai Next Gen Verna 1.6 SX (O) VTVT (Rs,12,736,10.00) ಒಟ್ಟು ಮೊತ್ತ ರೂ.31,838,62.00 ಗಳಿಗೆ ಹೊಸ ವಾಹನಗಳನ್ನು ಖರೀದಿಸಲು Proforma Invoice ಲಗತ್ತಿಸಿ ಅನುಮತಿ ನೀಡಲು ಕೋರಿರುತ್ತಾರೆ.

2. ಡ್ರಿಪ್ ಯೋಜನೆಗೆ ಎರಡು Toyota Innova Crysta VX 7 MT ಮತ್ತು ಒಂದು Hyundai Verna 1.6 SX (O) VTVT ವಾಹನಗಳನ್ನು ಖರೀದಿಸಲು ಅಧಿಕಾರಯುಕ್ತ ಸಮಿತಿಯ ಅಧ್ಯಕ್ಷರಾದ ಅಪರ ಮುಖ್ಯ ಕಾರ್ಯದರ್ಶಿಗಳು ಅನುಮೋದನೆ ನೀಡಿರುತ್ತಾರೆ. ಆದರೆ ಯೋಜನಾ ನಿರ್ದೇಶಕರು, ಡ್ರಿಪ್ ರವರು Toyota Innova Crysta Z 7s MT ಮಾದರಿಯ ಎರಡು ವಾಹನಗಳ (ಪ್ರತಿ ವಾಹನದ ಬೆಲೆ ರೂ.20,98,000.00) ಖರೀದಿಗೆ ಪರಿಷ್ಕೃತ Proforma Invoice ನ್ನು ಸಲ್ಲಿಸಿರುತ್ತಾರೆ ಎರಡು ವಾಹನಗಳಿಂದಾಗಿ ರೂ.3,75,496.00 ಹೆಚ್ಚಿಗೆಯಾಗಿರುತ್ತದೆ ಹಾಗೂ ಒಂದು Hyundai Verna 1.6 SX (O) VTVT (ವಾಹನದ ಬೆಲೆ ರೂ.12,73,610.00) ವಾಹನ ಸೇರಿದಂತೆ ಒಟ್ಟು 3 ವಾಹನಗಳನ್ನು ಖರೀದಿಸಲು ಯೋಜನಾ ನಿರ್ದೇಶಕರು, ಎಸ್.ಪಿ.ಎಂ.ಯು. (ಡ್ರಿಪ್) ರವರು ಕೋರಿರುತ್ತಾರೆ.

3. ಆರ್ಥಿಕ ಇಲಾಖೆಯು ದಿನಾಂಕ:26.03.2019ರ ಟಿಪ್ಪಣಿಯಲ್ಲಿ ವಿಶ್ವಬ್ಯಾಂಕ್ ನೆರವಿನ ಎಸ್.ಪಿ.ಎಂ.ಯು-ಡ್ರಿಪ್ ಘಟಕಕ್ಕೆ, ಯೋಜನಾ ಉದ್ದೇಶಕ್ಕಾಗಿ (Project Purpose) ಈ ಕುರಿತು ಹೊರಡಿಸಲಾಗಿರುವ ಮಾರ್ಗಸೂಚಿಗಳನ್ನು ಪಾಲಿಸುವ ಷರತ್ತುಗಳಿಗೆ ಒಳಪಟ್ಟು 03 ವಾಹನಗಳನ್ನು ಖರೀದಿಸಲು ಆರ್ಥಿಕ ಇಲಾಖೆಯು ಸಹಮತಿಸಿದೆ.

4. 2018-19ನೇ ಸಾಲಿನಲ್ಲಿ ಡ್ರಿಪ್-ಇಎಪಿ ಯೋಜನೆಗೆ ಲೆಕ್ಕ ಶೀರ್ಷಿಕೆ:4701-80-800-0-01-059 ಅಡಿಯಲ್ಲಿ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಗೆ ಮರು ಹಂಚಿಕೆ ಮೂಲಕ ರೂ.497.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

4. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 06 ಎನ್‌ಎಂಎಸ್ 2019, ಬೆಂಗಳೂರು, ದಿನಾಂಕ:26-03-2019**

ವಿಶ್ವಬ್ಯಾಂಕ್ ನೆರವಿನ ಎಸ್.ಪಿ.ಎಂ.ಯು-ಡ್ರಿಪ್ ಯೋಜನಾ ಘಟಕಕ್ಕೆ ಕೆಳಕಂಡ 03 ವಾಹನಗಳನ್ನು DG&SD ದರದಲ್ಲಿ ಖರೀದಿಸಲು ಅನುಮೋದನೆ ನೀಡಲಾಗಿದೆ.

| ಕ್ರ.ಸಂ | ವಾಹನ ಮಾದರಿ | ವಾಹನಗಳ ಸಂಖ್ಯೆ |
|---|---|---|
| 1 | Innova Crysta Z 7s MT/S White | 02 |
| 2 | Hyundai Verna 1.6 SX (O) VTVT | 01 |
| | ಒಟ್ಟು | 03 |

2. ಸದರಿ ವಾಹನಗಳ ಖರೀದಿಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ:4701-80-800-0-80-059 ರಡಿ ಭರಿಸತಕ್ಕದ್ದು.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 213 ಆಕೋ-1/2019, ದಿನಾಂಕ:26.03.2019 ರಲ್ಲಿ ನೀಡಿರುವ ಸಹಮತಿ ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
26/03/19

ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2),
ಜಲ ಸಂಪನ್ಮೂಲ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಬೆಂಗಳೂರು

(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)
ಜಲ ಸಂಪನ್ಮೂಲ ಇಲಾಖೆ.

ಇವರಿಗೆ :-

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ವಿಧಾನಸೌಧ
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಲೋ.ಇ. (ಆರ್ಥಿಕ ಕೋಶ), ಆರ್ಥಿಕ ಇಲಾಖೆ, ವಿಧಾನಸೌಧ
5. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು
6. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಹಾಗೂ ನೋಡಲ್ ಅಧಿಕಾರಿ, ಎಸ್.ಪಿ.ಎಂ.ಯು-ಡ್ರಿಪ್ ಘಟಕ, ಬೆಂಗಳೂರು
7. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಕೇಂದ್ರ ಮುಖ್ಯ ಗೋಪುರ, ಬೆಂಗಳೂರು
8. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ಬೆಂಗಳೂರು
9. ಖಜಾನಾಧಿಕಾರಿಗಳು, ರಾಜ್ಯ ಹುಜೂರ್/ಅರ್ಬನ್ ಖಜಾನೆ, ಬೆಂಗಳೂರು
10. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿಯವರಿಗೆ
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು